# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

78

ನಿಗಮ ಕಛೇರಿ, ನಂ 29,
ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ,
2ನೇ ಹಂತ ವಿಜಯನಗರ
ಮೈಸೂರು-570017.
Website : www.cescmysore.org
CIN : 40109KA2004SGC035177

ಸಹಾಯಕ ಕಾರ್ಯ ನಿರ್ವಾಹಕಇಂಜಿನಿಯರ್(ವಿ),
ನ.ರಾ.ಮೊಹಲ್ಲಾ, ಉಪ-ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.
ಕಛೇರಿ ಸಂಖ್ಯೆ : 0821-2456201
ಮೊಬೈಲ್ : 9448994742

ಕ್ರಮ.ಸಂಖ್ಯೆ : ಸಕಾಇಂ(ವಿ)/ಸಇಂ(ತಾ)/ನರಾಮೊ/19-20/ 3726-27 ದಿನಾಂಕ : 13/11/19

ಲಗತ್ತು :

## ಜನ ಸಂಪರ್ಕ ಸಭೆ ನಡಾವಳಿ

ದಿನಾಂಕ 30.10.2019 ರಂದು ಬೆಳಿಗ್ಗೆ 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕಾ ಮತ್ತು ಪಾ ವೃತ್ತ, ಮೈಸೂರುರವರ ಅಧ್ಯಕ್ಷತೆಯಲ್ಲಿ ಎನ್.ಆರ್.ಮೊಹಲ್ಲಾ ಉಪ-ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.**

1. ಶ್ರೀ.ಯೋಗೇಶ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾವಿಸನಿನಿ, ಎನ್.ಆರ್.ಮೊಹಲ್ಲಾ ವಿಭಾಗ,
2. ಶ್ರೀ.ಎಹಸಾನ್ ಉಲ್ಲ್ ಹಕ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ಉಪವಿಭಾಗ.
3. ಶ್ರೀಮತಿ.ಸುನೀತ, ಕಿರಿಯ ಇಂಜಿನಿಯರ್(ವಿ), ಪ್ರಭಾರ ಸಹಾಯಕ ಇಂಜಿನಿಯರ್(ತಾಂ),ನ.ರಾ.ಮೊಹಲ್ಲಾ ಶಾಖೆ.
4. ಶ್ರೀ.ವಿಶ್ವಾಸ್, ಸಹಾಯಕ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.
5. ಶ್ರೀ ವಿನೋದ್ ಕುಮಾರ್, ಸಹಾಯಕ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
6. ಶ್ರೀ.ವೈ.ಸಿ.ನಿತೇಶ್, ಸಹಾಯಕ ಇಂಜಿನಿಯರ್(ವಿ), ಸಿದ್ದಲಿಂಗಪುರ ಶಾಖೆ.
7. ಶ್ರೀ.ವೆಂಕಟೇಶ್, ಕಿರಿಯ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
8. ಶ್ರೀ.ನಾಗೇಂದ್ರ ಪ್ರಸಾದ್, ಸಹಾಯಕ ಲೆಕ್ಕಾಧಿಕಾರಿ,ಎನ್.ಆರ್.ಮೊಹಲ್ಲಾ ಉಪವಿಭಾಗ.
9. ಶ್ರೀಮತಿ.ನಾಗರತ್ನ, ಹಿರಿಯ ಸಹಾಯಕರು,ಎನ್.ಆರ್.ಮೊಹಲ್ಲಾ ಉಪವಿಭಾಗ.
10. ಶ್ರೀಮತಿ.ವಸಂತಕುಮಾರಿ. ಹಿರಿಯ ಸಹಾಯಕರು, ಸಿದ್ದಲಿಂಗಪುರ ಶಾಖೆ.

**ಸಭೆಯಲ್ಲಿ ಹಾಜರಿದ್ದ ಗ್ರಾಹಕರುಗಳು**

1. ಶ್ರೀ. ಸಮೀ ಇಮ್ರಾನ್ ಖಾನ್, ಕಾರ್ಪೋರೇಟರ್ ನಂ-9, # 58 ಅಜ್ಜು ಲೇ ಔಟ್, ಮೈಸೂರು.
2. ಶ್ರೀ. ರವಿಕುಮಾರ್, ನಂ-154, 6ನೇ ಕ್ರಾಸ್, ನಾಯ್ಡುನಗರ ಬಸ್ ಸ್ಟ್ಯಾಂಟ್ ಹತ್ತಿರ, ಮೈಸೂರು.
3. ಶ್ರೀ. ರಿಜ್ವಾನ್, 1ನೇ ಹಂತ, ಕೆಸರೆ, ಮೈಸೂರು.
4. ಶ್ರೀ.ಎನ್.ನಾಗರಾಜು, ನಂ-4592-1ಮ, 4ನೆ ಕ್ರಾಸ್, ಸೆಂಟ್ ಮೇರಿಸ್ ರೋಡ್, ಎನ್.ಆರ್.ಮೊಹಲ್ಲಾ, ಮೈಸೂರು.
5. ಶ್ರೀ.ಜಿ.ನಾಗರಾಜು, ನಂ-66, ಕೆಸರೆ, 2ನೇ ಹಂತ, 2ನೇ ಕ್ರಾಸ್, ಮೈಸೂರು.
6. ಶ್ರೀ.ಎಸ್.ಮಂಜುನಾಥ್, ನಂ-362, EWS 3ನೇ ಹಂತ, ಬನ್ನಿಮಂಟಪ, ಮೈಸೂರು.

6693 26 NOV 2019

ಅಇಂ(ವಿ) ಕಛೇರಿ ಚಾ.ವಿ.ಸ.ನಿ.ನಿ.

Scanned by CamScanner

ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಗ್ರಾಹಕರುಗಳ ದೂರುಗಳನ್ನು ಸ್ವೀಕರಿಸಿ ಅದರ ಕುರಿತಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಚರ್ಚಿಸಿದರು.

1. ಶ್ರೀ.ಸಮೀ, ಕಾರ್ಪೋರೇಟರ್ ರವರು ಪರಿವರ್ತಕದ ಎಲ್.ಟಿ ವೈರ್‌ಗಳ ಮೇಲೆ ಮರದ ರಂಬೆಗಳು ಬಿದ್ದು, ತೊಂದರೆಯಾದರೆ ಸೇವಾ ಕೇಂದ್ರದ ವಾಹನ ಬೇಗ ಬರುವುದಿಲ್ಲ ಮತ್ತು ಸೇವಾ ಕೇಂದ್ರದ ದೂರವಾಣಿ ಸಂಖ್ಯೆಗೆ ಕರೆಗಳನ್ನು ಮಾಡಿದಾಗ ಕರೆಗಳನ್ನು ಸ್ವೀಕರಿಸುವುದಿಲ್ಲ ವೆಂದು ತಿಳಿಸಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರಿಗೆ ಸಂಬಂಧಪಟ್ಟ ಸಿಬ್ಬಂದಿಗಳನ್ನು ವಿಚಾರಿಸಿ ಅಗತ್ಯಕ್ರಮವನ್ನು ಕೈಗೊಳ್ಳುವಂತೆ ಸೂಚಿಸಿದರು.
2. ಶ್ರೀ.ಸಮೀ, ಕಾರ್ಪೋರೇಟರ್ ರವರು 2ನೇ ಹಂತ, ಉರ್ದು ಶಾಲೆಯ ಹತ್ತಿರ ಮತ್ತು ಅಜ್ಜು ತೋಟಗಳಲ್ಲಿ ಭಾಗಿರುವ ಕಂಬಗಳನ್ನು ಮತ್ತು ಲೈನ್‌ಗಳನ್ನು ಸರಿಪಡಿಸಬೇಕು ಎಂದು ಕೋರಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಂಬಂಧಪಟ್ಟ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಲು ಸೂಚಿಸಿದರು.
3. ಶ್ರೀ.ಸಮೀ, ಕಾರ್ಪೋರೇಟರ್ ರವರು 2ನೇ ಹಂತ ಕೆಸರೆಯ ಗುಡಿಸಲುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲು ಕೋರಿರುತ್ತಾರೆ. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೆ.ಇ.ಆರ್.ಸಿ. ನಿಯಮದ ಪ್ರಕಾರ ಗುಡಿಸಲುಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಸಾಧ್ಯವಿಲ್ಲವೆಂದು ತಿಳಿಸಿದರು.
4. ಶ್ರೀ.ಸಮೀ, ಕಾರ್ಪೋರೇಟರ್ ರವರು 4ನೇ ಕ್ರಾಸ್ ಅಜ್ಜು ತೋಟದ ಮಸೀದಿ ಹಿಂಭಾಗದಲ್ಲಿ ವೋಲ್ಟೇಜ್ ವ್ಯತ್ಯಾಸವಿರುತ್ತದೆಂದು ತಿಳಿಸಿದರು. ಈ ಸಂಬಂಧ ಶಾಖಾಧಿಕಾರಿಯವರು ಎಲ್.ಟಿ 2ವೈರ್ ನಿಂದ 5 ವೈರ್‌ಗೆ ಅಂದಾಜುಪಟ್ಟಿಯನ್ನು ತಯಾರಿಸಿ ಕಾಮಗಾರಿಯು ಪ್ರಗತಿಯಲ್ಲಿ ಇರುತ್ತದೆಂದು ತಿಳಿಸಿದರು.
5. ಶ್ರೀ.ಸಮೀ, ಕಾರ್ಪೋರೇಟರ್ ರವರು ನಗುವಿನ ಹಳ್ಳಿ ರಸ್ತೆ ಚಿಕ್ಕದಾಗಿರುವುದರಿಂದ ಎಲ್.ಟಿ. ಕಂಬಗಳನ್ನು ಸ್ಥಳಾಂತರಿಸಲು ಕೋರಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು 10% ಮೇಲ್ವಿಚಾರಣೆ ಶುಲ್ಕವನ್ನು ಪಾವತಿಸಿ ಸ್ವಯಂ ನಿರ್ವಹಣೆ ಯೋಜನೆಯಲ್ಲಿ ತಾವೇ ಕಾಮಗಾರಿಯನ್ನು ಮಾಡಿಕೊಳ್ಳುವಂತೆ ತಿಳಿಸಿದರು.
6. ಶ್ರೀ.ಸಮೀ, ಕಾರ್ಪೋರೇಟರ್, ಕೊಳಚೆ ನಿರ್ಮೂಲನೆ ಮಂಡಳಿಯಿಂದ ಹಕ್ಕು ಪತ್ರ ನೀಡದೆ ಇರುವ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡಲು ಕೋರಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸದರಿ ಮನೆಗಳಿಗೆ ಕೊಳಚೆ ಮಂಡಳಿಯವರು ಹಕ್ಕು ಪತ್ರಗಳನ್ನು ನೀಡಿದ್ದು, ಇಂತಹ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡಲಾಗಿದೆ. ಹಕ್ಕು ಪತ್ರಗಳನ್ನು ನೀಡದೇ ಇರುವ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ನೀಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.
7. ಶ್ರೀ.ಸಮೀ, ಕಾರ್ಪೋರೇಟರ್ ಎನ್.ಆರ್.ಮೊಹಲ್ಲಾ ವ್ಯಾಪ್ತಿಯ 14 ಮಸೀದಿಗಳಿಗೆ ಶುಕ್ರವಾರ ದಿನಗಳಲ್ಲಿ ವಿದ್ಯುತ್ ಅಡಚಣೆಯಾಗದಂತೆ ಕೋರಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತುರ್ತು ಸಂದರ್ಭದಲ್ಲಿ ಮಾತ್ರ ವಿದ್ಯುತ್ ಅಡಚಣೆಯಾಗುತ್ತದೆ ಎಂದು ತಿಳಿಸಿದರು.
8. ಶ್ರೀ.ಮಂಜುನಾಥ್ ರವರು ಬನ್ನಿಮಂಟಪ ಶಾಖೆಯಲ್ಲಿ ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದ ರೂಟರ್ ಸುಟ್ಟು ಹೋಗಿದ್ದು, ಇದರಿಂದ ಗ್ರಾಹಕರ ಬಿಲ್ಲುಗಳನ್ನು ಪರಿಶೀಲಿಸಲು ತೊಂದರೆಯಾಗುತ್ತಿದ್ದು, ಇದಕ್ಕೆ ಬದಲಿ ವ್ಯವಸ್ಥೆಯನ್ನು ಕಲ್ಪಿಸಲು ಕೋರಿದರು. ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಈಗಾಗಲೇ ಬಿ.ಎಸ್.ಎನ್.ಎಲ್ ಸಂಸ್ಥೆಯಿಂದ ಬದಲಿ ವ್ಯವಸ್ಥೆಗೆ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

21/11/19

**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)**
**ಎನ್.ಆರ್.ಮೊಹಲ್ಲಾ ಉಪ-ವಿಭಾಗ**
**ಚಾ.ವಿ.ಸ.ನಿ.ನಿ. ಮೈಸೂರು.**

Scanned by CamScanner

**ಪ್ರತಿಗಳು:-**

- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರುರವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರುರವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ., ಎನ್.ಆರ್.ಮೊಹಲ್ಲಾರವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು, ಎನ್.ಆರ್.ಮೊಹಲ್ಲಾ/ ಬನ್ನಿಮಂಟಪ/ ಸಿದ್ದಲಿಂಗಪುರರವರುಗಳು ಮೇಲ್ಕಂಡ ದೂರಗಳನ್ವಯ ಸ್ಥಳಪರಿಶೀಲಿಸಿ ಉಪವಿಭಾಗ ಕಚೇರಿಗೆ ವರದಿ ನೀಡುವುದು.
- ಸಹಾಯಕ ಲೆಕ್ಕಾಧಿಕಾರಿ /ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ/ಕ.ಪ್ರ.

Scanned by CamScanner